# ಲಕ್ಷ್ಮೀಕಾಂತ ಬಾರೊ, ಶುಭ

1. **Ref.:** Dasara Padagalu – Purandara Dasara Keerthane, Samyukta Samputa, Edited by Shri Pavanje Gururao, Sriman Madhwa Siddantha Granthalaya, Udupi, page No. 505.
2. **Ref.:** Shri Purandara Dasara Sahitya Part – 1, Pooja Tatva, edited by Shri Betageri Krishna Sharma and Shri Bengeri Huchha Rayaru, page No. 63.
3. **Note:** This song is not available in the books of Prof. S.K. Ramachandra Rao.
4. **Note:** Lyrics given here are as per Ref. 1. The wordings in Ref. 2 are same except minor differences which are not considered here.
5. **Note:** Singer has followed these wordings.
6. **Note:** Ankita is different in both the books. We have considered book in Ref.1 as standard and taken that Ankita for listing.

ರಾಗ: ಶಂಕರಾಭರಣ ತಾಳ: ಆದಿ

ಲಕ್ಷ್ಮೀಕಾಂತ ಬಾರೋ ಶುಭ ಲಕ್ಷಣವಂತ ಬಾರೋ
ಪಕ್ಷಿವಾಹನವೇರಿದವನೆ ಬಾರೋ ಪಾವನಮೂರ್ತಿ ಬಾರೋ || ಪ ||

ಆದಿಮೂಲ ವಿಗ್ರಹ ವಿನೋದಿ ನೀನೆ ಬಾರೋ
ಸಾಧು ಸಜ್ಜನ ಸತ್ಯಯೋನಿ ದಾನಿ ನೀನೆ ಬಾರೋ || ೧ ||

ಗಾಡಿಗಾರ ಕೃಷ್ಣ ನಿನ್ನ ಬೇಡಿಕೊಂಬೆ ಬಾರೋ
ರೂಢಿ ಮಾತನಾಡಿ ಸರ್ವ ರೂಢಿಗೊಡೆಯ ಬಾರೋ || ೨ ||

ನಿನ್ನ ಪಾದಂಗಳ ನಾನು ಬಣ್ಣಿಸಿ ಕರೆವೆ ಬಾರೋ
ಪನ್ನಗಶಯನ ಪುರಂದರ ವಿಠಲ ಬಾರೋ || ೩ ||

**ಕಠಿಣ ಪದಗಳ ಅರ್ಥ ಮತ್ತು ಟಿಪ್ಪಣಿ:**

ಇದೊಂದು ಆವಾಹನ ಕೀರ್ತನೆ.

**ಶುಭ ಲಕ್ಷಣವಂಥ =** (ಭಾರತ ಅನುಶಾಸನ, ವಿಷ್ಣು ಸಹಸ್ರನಾಮ ೮೪-೮೫)

**ಆದಿ ಮೂಲ ವಿಗ್ರಹ =** ವಿಶ್ವಕ್ಕೆ ಮೂಲ ಕಾರಣನಾದ ಮೂರ್ತಿ

**ವಿನೋದಿ =** ವಿನೋದಕ್ಕಾಗಿ ಜಗತ್ತನ್ನು ಸೃಷ್ಟಿಸುವವ

**ಸಾಧು ಸಜ್ಜನ ಸತ್ಯ ಯೋನಿ =** ಸಾಧು ಸಜ್ಜನರಿಗೆ ನಿಜವಾದ ಉತ್ಪತ್ತಿ ಕಾರಣ (ಭಾಗವತ ೧೦, ೨ - ೨೬)

**ರೂಢಿ ಮಾತು =** ಸಲುಗೆಯ ನುಡಿ

**ರೂಢಿಗೊಡೆಯ =** ಪೃಥ್ವಿ ಪತಿ

**ಗಾಡಿಕಾರ =** ಸುಂದರ, ಬೆಡಗುಗಾರ

**Classification:** Keerthane
**Ankita:** purandara vittala
**Location:** NA
**Category:** Binnaha
**Sub-Category:** Vishnu, Lakshmi, shubha, pakshi, santosha, dana, Krishna,
**Pravachana:** NA
**Explanation:** NA